# 2014–15 ನೇ ಸಾಲಿಗೆ ಆಯ್ಕೆಯಾದ ಹಾವೇರಿ ಶ್ರೇಷ್ಠ ಕೃಷಿ ಮಹಿಳೆ

ಶ್ರೀಮತಿ ಬಸಮ್ಮ ಬಸವಣ್ಣೆಪ್ಪ ಬಾದಾಮಗಟ್ಟಿ
ಸಾ: ಶಿಗ್ಗಾಂವ ತಾ: ಶಿಗ್ಗಾಂವ ಜಿ: ಹಾವೇರಿ
ಫೋ: 9480080347



## ಕೃಷಿಯಲ್ಲಿ ಮಾಡಿದ ಆವಿಷ್ಕಾರ





ಕೃಷಿ ಪ್ರಧಾನವಾದ ನಮ್ಮ ದೇಶದಲ್ಲಿ ಮುಖ್ಯವಾಗಿ ಮಹಿಳೆಯರು ಕೃಷಿಯನ್ನು ತಮ್ಮ ಉದ್ಯೋಗವನ್ನಾಗಿ ಪರಿಗಣಿಸಿರುವುದು ವಿರಳ. ಆದರೆ ಶ್ರೀಮತಿ ಬಸಮ್ಮ ಬಸವಣ್ಣೆಪ್ಪ ಬಾದಾಮಗಟ್ಟಿ ಯವರು ಎಸ್.ಎಸ್.ಎಲ್.ಸಿ. ಮುಗಿಸಿ ವ್ಯವಸಾಯವನ್ನು ತಮ್ಮ ಉದ್ಯೋಗವನ್ನಾಗಿ ಮಾಡಿಕೊಂಡು ಕೃಷಿ ಕ್ಷೇತ್ರಕ್ಕೆ ಪ್ರೇರಕ ಶಕ್ತಿಯಾಗಿ ಬೆಳೆದು ನಿಂತಿದ್ದಾರೆ. ಇದರೊಂದಿಗೆ ಹೈನುಗಾರಿಕೆ ಪ್ರಾರಂಭಿಸಿ ಕೆಲವೇ ವರ್ಷಗಳಲ್ಲಿ ಒಂದು ಆಕಳನಿಂದ ಪ್ರಾರಂಭಿಸಿ ಈಗ ಆರು ಆಕಳುಗಳನ್ನು ಹೊಂದಿ ಹೈನು ಘಟಕ ಅಭಿವೃದ್ಧಿ ಮಾಡುರುವರು. 20 ಗುಂಟೆಯಲ್ಲಿ ನಾಲ್ಕು ಹಂತದಲ್ಲಿ ಯೋಜಿತವಾಗಿ ಮೇವು ಕಟಾವು ಹಾಗೂ ನಿರ್ವಹಣೆ ಮಾಡಿದ್ದಾರೆ ಮತ್ತು ಮೂರು ಎಕರೆ ಕ್ಷೇತ್ರದಲ್ಲಿ ಮೆಣಸಿನಕಾಯಿ, ಬದನೆ, ಟೊಮೆಟೋ, ಹೀರೇಕಾಯಿ, ಸವತೆಕಾಯಿ, ಹಾಗೂ ಗೋವಿನಜೋಳದಿಂದ ಉತ್ತಮ ಆದಾಯದ ನಿರೀಕ್ಷೆ. ಬದುವಿನ ಮೇಲೆ ಹುಲ್ಲು ನಾಟಿ ಮಾಡಿ ಮಣ್ಣು ಮತ್ತು ನೀರು ಸಂರಕ್ಷಣೆ ಮಾಡುತ್ತಿರುವರು. ಗಂಡ ಹಾಗೂ ಇಬ್ಬರು ಮಕ್ಕಳು ಇವರ ಜೊತೆಗೆ ಕೈಜೋಡಿಸಿ ಹೈನುಗಾರಿಕೆಯಲ್ಲ ಯಶಸ್ವಿಯಾಗಿ ನಿರ್ವಹಿಸುತ್ತಿರುವರು.

ಪ್ರತಿ ವರ್ಷಕ್ಕೆ ಒಂದು ಲಕ್ಷದವರೆಗೂ ಹೈನುಗಾರಿಕೆಯಲ್ಲ ಲಾಭ ಪಡೆಯುತ್ತಿದ್ದಾರೆ. ಕೃಷಿ ಭೂಮಿಯಲ್ಲಿ ವರ್ಷಕ್ಕೆ 36 ಸಾವಿರ ರೂಪಾಯಿ ಲಾಭ ಪಡೆಯುತ್ತಿದ್ದಾರೆ.